# ಸಮಗ್ರ ದಾಸಸಾಹಿತ್ಯ ಸಂಪುಟಗಳ ಒಳ–ಹೊರಗು.

**ಡಾ. ತಿಪ್ಪೇರುದ್ರಯ್ಯ ಸಿದ್ಧಯ್ಯ ಮಠದ**
ಸಾ/ಪೋ ಚಿಕ್ಕಯಡಚಿ
ತಾ: ರಟ್ಟೀಹಳ್ಳಿ
ಜಿ: ಹಾವೇರಿ.

**Article Link: https://aksharasurya.com/2023/09/thipperudraiah-siddaiah-mathad/**

ದಾಸಸಾಹಿತ್ಯದ ಪ್ರಕಟಣೆಯ ಸುವರ್ಣಯುಗವೆಂದರೆ ಅದು ಪಾವಂಜೆ ಮತ್ತು ಗೊರೇಬಾಳರ ಕಾಲದಲ್ಲಾದ ಪ್ರಕಟಣೆಗಳು. ಆದರೆ ಈ ಕಾಲದಲ್ಲಿ ಕೇವಲ ದಾಸಸಾಹಿತ್ಯದ ಸಂಪಾದನೆಯನ್ನಷ್ಟೇ ಮುಖ್ಯವಾಗಿರಿಸಿಕೊಂಡು ಸಂಪಾದನೆಗಳು ನಡೆದವು. ಕಾಲಾ ನಂತರದ ದಾಸಸಾಹಿತ್ಯದ ಸಂಪಾದನೆ ಆಧುನಿಕ ಸಂಪಾದನಾ ವಿಧಾನದನ್ವಯ ಜರುಗಲಾರಂಭಿಸಿ ಅನೇಕ ಕೃತಿಗಳು ಸಂಪಾದನೆಯಾಗಿ ಪ್ರಕಟಣೆಗೊಂಡವು. ಇವುಗಳಲ್ಲಿ ಕೆಲವು ಕೃತಿಗಳನ್ನು ಹೊರತುಪಡಿಸಿ ಉಳಿದೆಲ್ಲ ಕೃತಿಗಳು ವೈಯಕ್ತಿಕ ಪ್ರಕಟಣೆಗಳಾಗಿದ್ದವು. ಹಾಗಾಗಿ ಸರ್ಕಾರಕ್ಕೆ ದಾಸಸಾಹಿತ್ಯದ ಸಂಪಾದನಾ ಕೃತಿಗಳನ್ನು ಪ್ರಕಟಿಸುವ ಒಂದು ಯೋಜನೆಯನ್ನು ರೂಪಿಸಬೇಕೆಂದು ಹಲವು ವರ್ಷಗಳಿಂದ ಕೇಳಿಬರುತ್ತಿದ್ದ ಕೂಗು. ಇಂತಹ ಕೋರಿಕೆಯ ಫಲವಾಗಿ 2003ರಲ್ಲಿ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವ ಒಂದು ಯೋಜನೆಯನ್ನು ರೂಪಿಸಿತು. ಅದರ ಫಲವೇ ಈ 35 ಸಂಪುಟಗಳ 50 ಕೃತಿಗಳು. ಈ ಯೋಜನೆಯಲ್ಲಿ ಮೂಡಿಬಂದ ಕೃತಿಗಳ ಆಂತರಿಕ ಮತ್ತು ಬಾಹ್ಯವಾಗಿರುವ ಕೆಲವು ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

## KEYWORDS:

ದಾಸಸಾಹಿತ್ಯ, ಪ್ರಕಟಣೆ, ಆಧುನಿಕ ಸಂಪಾದನಾ ವಿಧಾನ.

ದಾಸಸಾಹಿತ್ಯದ ಪ್ರಕಟಣೆಯ ಸುವರ್ಣಯುಗವೆಂದರೆ ಅದು ಪಾವಂಜೆ ಮತ್ತು ಗೊರೇಬಾಳರ ಕಾಲದಲ್ಲಾದ ಪ್ರಕಟಣೆಗಳು. ಆದರೆ ಈ ಕಾಲದಲ್ಲಿ ಕೇವಲ ದಾಸಸಾಹಿತ್ಯದ ಸಂಪಾದನೆಯನ್ನಷ್ಟೇ ಮುಖ್ಯವಾಗಿರಿಸಿಕೊಂಡು ಸಂಪಾದನೆಗಳು ನಡೆದವು. ಕಾಲಾ ನಂತರದ ದಾಸಸಾಹಿತ್ಯದ ಸಂಪಾದನೆ ಆಧುನಿಕ ಸಂಪಾದನಾ ವಿಧಾನದನ್ವಯ ಜರುಗಲಾರಂಭಿಸಿ ಅನೇಕ ಕೃತಿಗಳು ಸಂಪಾದನೆಯಾಗಿ ಪ್ರಕಟಣೆಗೊಂಡವು. ಇವುಗಳಲ್ಲಿ ಕೆಲವು ಕೃತಿಗಳನ್ನು ಹೊರತುಪಡಿಸಿ ಉಳಿದೆಲ್ಲ ಕೃತಿಗಳು ವೈಯಕ್ತಿಕ ಪ್ರಕಟಣೆಗಳಾಗಿದ್ದವು. ಹಾಗಾಗಿ ಸರ್ಕಾರಕ್ಕೆ ದಾಸಸಾಹಿತ್ಯದ ಸಂಪಾದನಾ ಕೃತಿಗಳನ್ನು ಪ್ರಕಟಿಸುವ ಒಂದು ಯೋಜನೆಯನ್ನು ರೂಪಿಸಬೇಕೆಂದು ಹಲವು ವರ್ಷಗಳಿಂದ ಕೇಳಿಬರುತ್ತಿದ್ದ ಕೂಗು. ಇಂತಹ ಕೋರಿಕೆಯ ಫಲವಾಗಿ

2003ರಲ್ಲಿ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವ ಒಂದು ಯೋಜನೆಯನ್ನು ರೂಪಿಸಿತು. ಅದರ ಫಲವೇ ಈ 35 ಸಂಪುಟಗಳ 50 ಕೃತಿಗಳು. ಈ ಯೋಜನೆಯಲ್ಲಿ ಮೂಡಿಬಂದ ಕೃತಿಗಳ ಆಂತರಿಕ ಮತ್ತು ಬಾಹ್ಯವಾಗಿರುವ ಕೆಲವು ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಸುಮಾರು 139 ಜನ ದಾಸರು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರುಸಾವಿರಕ್ಕೂ ಅಧಿಕವಾಗಿವೆ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೆ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆ ಕಡೆಗೆ ಸಿಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಹಾಕಿಕೊಂಡ ಯೋಜನೆಯ ಫಲವೆ ಈ 'ಸಮಗ್ರ ದಾಸಸಾಹಿತ್ಯ ಸಂಪುಟಗಳು'.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಡಿಯಲ್ಲಿ ಕೈಗೊಂಡ ಈ ಯೋಜನೆಯಲ್ಲಿ ಕಾರ್ಯನಿರ್ವಾಹಕ ಸಂಪಾದಕರಾಗಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್.ನಾಗರತ್ನ, ಪ್ರೊ. ವಸಂತ ಕುಷ್ಟಗಿ ಅವರು ಕಾರ್ಯನಿರ್ವಹಿಸಿರುವುದಲ್ಲದೇ ಇದರಲ್ಲಿ ಡಾ. ಎಂ.ಎಂ.ಕಲಬುರ್ಗಿ, ಪ್ರೊ. ಎಂ.ರಾಜಗೋಪಾಲಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ, ಡಾ. ಬಸವರಾಜ ಸಬರದ ಅವರು ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರುಗಳ ಜೊತೆಗೆ ನಾಡಿನ ಅನೇಕ ವಿದ್ವಾಂಸರುಗಳ ನೆರವನ್ನು ಈ ಯೋಜನೆಗೆ ಪಡೆದು 35 ಸಂಪುಟಗಳನ್ನೊಳಗೊಂಡ 50 ಕೃತಿಗಳನ್ನು 2003ರಲ್ಲಿ ಪ್ರಕಟಗೊಳಿಸಲಾಯಿತು.

ಪ್ರಸ್ತುತ ಸಂಪುಟಗಳನ್ನು ಪ್ರಕಟಿಸುವ ಯೋಜನೆಯಲ್ಲಿ ಸಂಪಾದಕ ಮಂಡಳಿಯು ಅನೇಕ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿತು. ಅದನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.[1]

1. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂತಹ ಹಾಡುಗಳನ್ನು ಕೈಬಿಡಬೇಕು.
2. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ 'ಈ ಕೀರ್ತನೆ........ ದಾಸರ ಅಂಕಿತದಲ್ಲೂ ಇದೆ' ಎಂದು ಸೂಚಿಸಬೇಕು.

3. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು.
4. ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮ ನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿ ಕೊಡಬೇಕು.

ಹೀಗೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿ ಪ್ರಕಟಿಸಿದ ಈ ಸಂಪುಟಗಳಲ್ಲಿ ನೋಡುವುದಾದರೆ ಪ್ರತಿ ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು, ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಮುಂತಾದವುಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನು ನೀಡಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ಧಗಳ ಅರ್ಥ, ಟಿಪ್ಪಣಿ ಮತ್ತು ಕೊನೆಯಲ್ಲಿ ಬರುವ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ. 35 ಸಂಪುಟಗಳಿಂದ ಕೂಡಿದ ಈ ಯೋಜನೆಯಲ್ಲಿ ಕೆಲವು ಸಂಪುಟಗಳು ಎರಡು, ಮೂರು, ನಾಲ್ಕು ಭಾಗಗಳನ್ನು ಹೊಂದಿವೆ. ಪ್ರತಿ ಸಂಪುಟವೂ ಸಂಪಾದಕರ ಪ್ರಸ್ತಾವನೆಯನ್ನು ಹೊಂದಿದೆ.

ಸಮಗ್ರ ದಾಸಸಾಹಿತ್ಯ ಸಂಪುಟ ಯೋಜನೆಯಲ್ಲಿ 35 ಸಂಪುಟಗಳ 50 ಕೃತಿಗಳನ್ನು ಕಾಣುತ್ತೇವೆ. ಈ ಎಲ್ಲಾ ಕೃತಿಗಳನ್ನು ಸಂಪಾದಿಸಿ, ಪ್ರಕಟಿಸಲು ಹಲವು ವಿದ್ವಾಂಸರುಗಳು ಶ್ರಮಿಸಿರುವುದನ್ನು ಕಾಣುತ್ತೇವೆ. ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಒಳಗೊಂಡ ಕಾರ್ಯ ನಿರ್ವಾಹಕರ ಸಂಪಾದಕರ ಜೊತೆಗೆ ಡಾ. ಎಂ.ಎಂ. ಕಲಬುರ್ಗಿ, ಪ್ರೊ. ಎಂ. ರಾಜಗೋಪಾಲ ಆಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ, ಡಾ. ಬಸವರಾಜ ಸಬರದ ಅವರನ್ನು ಒಳಗೊಂಡ ಸಂಪಾದಕ ಮಂಡಳಿಯ ಸದಸ್ಯರ ಜೊತೆಗೆ ನಾಡಿನಾದ್ಯಂತ ದಾಸಸಾಹಿತ್ಯದಲ್ಲಿ ದುಡಿದ ವಿದ್ವಾಂಸರುಗಳಾದ ಡಾ. ಅರುಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ.ಆರ್. ಪಾಂಡುರಂಗ, ಡಾ. ಅನಂತ ಪದ್ಮನಾಭರಾವ್, ಪ್ರೊ. ಬಿ.ಆರ್. ಕುಲಕರ್ಣಿ, ಡಾ. ಕೆ.ಜಿ. ವೆಂಕಟೇಶ, ಪ್ರೊ. ಜಿ. ಅಶ್ವತ್‌ನಾರಾಯಣ್, ಡಾ.ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ.ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ದೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ.ಎಸ್. ವೆಂಕಟೇಶ ಮತ್ತು ಶ್ರೀ ಎಚ್.ಎಸ್. ಶ್ರೀನಿವಾಸಮೂರ್ತಿ ಹಾಗೂ

ಶ್ರೀಮತಿಯವರಾದ ನಳಿನಿ ವೆಂಕಟೇಶ, ಮೀನಾರವ್, ಲೀಲಾವತಿ ಎಸ್.ರಾವ್, ಡಾ. ಜಯಲಕ್ಷ್ಮೀ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾದಾಸ್, ಡಾ. ರಮಾ ಕಲ್ಲೋರಕರ್, ಡಾ. ಸೀತಾ ಗುಡೂರ ಕುಲಕರ್ಣಿ, ಎಚ್.ಎಸ್. ಪದ್ಮಾಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಇವರೆಲ್ಲರೂ ವಿವಿಧ ದಾಸಾರ್ಯರ ಕೀರ್ತನೆಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಲು ಸಾಹಿತ್ಯ ಸಂಪನ್ಮೂಲವನ್ನು ಒದಗಿಸಿದ ಪರಿಣಾಮವಾಗಿಯೇ ಸಮಗ್ರದಾಸಸಾಹಿತ್ಯ ಸಂಪುಟ ಯೋಜನೆಯಲ್ಲಿ 35 ಸಂಪುಟಗಳನ್ನೊಳಗೊಂಡ 50 ಕೃತಿಗಳು ಪ್ರಕಟಣೆಗೊಂಡವು.

ಈ ಮೇಲಿನ ವಿದ್ವಾಂಸರುಗಳ ಪಟ್ಟಿಯನ್ನು ಗಮನಿಸಿ ಹೇಳುವುದಾದರೆ ಕೀರ್ತನಸಾಹಿತ್ಯ ಪ್ರಕಟಣೆಯ ಈ ಹಿಂದಿನ ಕಾಲಾವಧಿಗೂ ಆಧುನಿಕ ಪ್ರಕಟಣೆಯ ಈ ಕಾಲಾವಧಿಗೂ ವ್ಯತ್ಯಾಸ ಕಾಣುತ್ತದೆ. ಹಿಂದಿನ ಕಾಲಾವಧಿಯಲ್ಲಿ ಹೊರಬಂದ ಕೀರ್ತನ ಸಾಹಿತ್ಯದ ಬಹುಪಾಲು ಕೃತಿಗಳು ದಾಸಸಾಹಿತ್ಯದ ಮೇಲೆ ಒಲವನ್ನು ಹೊಂದಿದ ವಿದ್ವಾಂಸರುಗಳ ಆಸಕ್ತಿಯಿಂದ ಹೊರಬಂದವುಗಳಾಗಿದ್ದವು. ಆದರೆ ಆಧುನಿಕ ಕಾಲಾವಧಿಯ ಪ್ರಕಟಣೆಯ ಬಹುಪಾಲು ಕೀರ್ತನ ಸಾಹಿತ್ಯದ ಕೃತಿಗಳು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ವಾಂಸರುಗಳ ಶ್ರಮದಿಂದ ಪ್ರಕಟಣೆಯ ಭಾಗ್ಯ ಕಂಡಂತಹವುಗಳು. ಈ ಕಾರಣದಿಂದಾಗಿಯೇ ಈ ಕಾಲಾವಧಿಯಲ್ಲಿ ಪ್ರಕಟವಾದ ಕೀರ್ತನ ಸಾಹಿತ್ಯದ ಬಹುಪಾಲು ಕೃತಿಗಳು ಆಧುನಿಕ ಸಂಪಾದನಾ ವಿಧಾನಗಳನ್ನು ಒಳಗೊಂಡು ಪ್ರಕಟವಾಗಿವೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಈ ಯೋಜನೆಯಲ್ಲಿ ಮೂಡಿಬಂದ ದಾಸಾರ್ಯರುಗಳ ಹೊರತಾಗಿಯೂ ಇನ್ನೂ ಹಲವಾರು ದಾಸರುಗಳ ಕೀರ್ತನೆಗಳು ಉಳಿದಿರಬಹುದು. ಅಂತಹ ಹ–ರಿದಾಸರುಗಳ ಕೀರ್ತನೆಗಳು ದೊರೆತರೆ ಪರಿಷ್ಕರಣದ ಸಂದರ್ಭದಲ್ಲಿ ಪ್ರಕಟಿಸುತ್ತೇವೆ ಎಂಬ ನಿರ್ದೇಶಕರ ಮಾತುಗಳಿಂದ ತಿಳಿಯುತ್ತದೆ. ಈ ಯೋಜನೆಯಲ್ಲಿ ಮೂಡಿಬಂದ ಪ್ರತಿ ಕೃತಿಯು ಸಂಪಾದಕರ ವಿದ್ವತ್‌ಪೂರ್ಣ ಪ್ರಸ್ತಾವನೆಯನ್ನು ಒಳಗೊಂಡು ಕೃತಿಯಲ್ಲಿ ಬರುವ ದಾಸಾರ್ಯರ ಜೀವನ ಚರಿತ್ರೆಯನ್ನು ಒಳಗೊಂಡಿದೆ. ಪ್ರತಿ ಕೃತಿಯಲ್ಲಿಯೂ ಆಯಾ ದಾಸರ ಕೃತಿಗಳ ಜೊತೆಗೆ ಅವರ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ನೀಡಲಾಗಿದೆ. ಹಾಗೆಯೇ ಅನುಬಂಧಗಳಲ್ಲಿ ಹೆಚ್ಚಿನ ಹಾಡುಗಳ ಪಟ್ಟಿ, ಟಿಪ್ಪಣಿಗಳು, ಕಠಿಣ ಶಬ್ದಗಳ ಅರ್ಥ, ಅಂಕಿತನಾಮ ಸೂಚಿ, ಕೀರ್ತನೆಗಳ ಅಕಾರಾದಿ ಸೂಚಿಯನ್ನು ಒಳಗೊಂಡಂತೆ ಪ್ರತಿ ಕೃತಿಯಲ್ಲಿಯೂ ಇದೇ ಮಾದರಿಯನ್ನು ಕಾಣುತ್ತೇವೆ. ಈ ಯೋಜನೆಯಲ್ಲಿ ಮೂಡಿಬಂದ 35 ಸಂಪುಟಗಳ 50 ಕೃತಿಗಳನ್ನು ಈ ಕೆಳಗಿನಂತೆ ಪಟ್ಟಿಮಾಡಲಾಗಿದೆ.

1. ಸಂಪುಟ–1 ಶ್ರೀಪಾದರಾಜರ ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು
2. ಸಂಪುಟ–2 ಶ್ರೀವಾದಿರಾಜರ ಕೀರ್ತನೆಗಳು
3. ಸಂಪುಟ–3: ಭಾಗ–1 ಪುರಂದರದಾಸರ ಕೀರ್ತನೆಗಳು
   ಭಾಗ–2 ಪುರಂದರದಾಸರ ಕೀರ್ತನೆಗಳು
4. ಸಂಪುಟ–4 ಪುರಂದರದಾಸರ ಉಗಾಭೋಗಗಳು ಹಾಗೂ ಸುಳಾದಿಗಳು
5. ಸಂಪುಟ–5: ಭಾಗ–1 ಕನಕದಾಸರ ಕೀರ್ತನೆಗಳು
   ಭಾಗ–2 ಕನಕದಾಸರ ಕೀರ್ತನೆಗಳು
6. ಸಂಪುಟ–6: ಭಾಗ–1 ಕಾಖಂಡಕಿ ಶ್ರೀ ಮಹಿಪತಿರಾಯರ ಕೀರ್ತನೆಗಳು
   ಭಾಗ–2 ಕಾಖಂಡಕಿ ಶ್ರೀ ಮಹಿಪತಿರಾಯರ ಕೀರ್ತನೆಗಳು
7. ಸಂಪುಟ–7 ಗಲಗಲಿ ಅವ್ವನವರ ಕೀರ್ತನೆಗಳು
8. ಸಂಪುಟ–8 ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು
9. ಸಂಪುಟ–9: ಭಾಗ–1 ಬೇಲೂರು ವೈಕುಂಠದಾಸರ ಮತ್ತು ಇತರ ವೈಷ್ಣವ ಹರಿದಾಸರ ಕೀರ್ತನೆಗಳು
   ಭಾಗ–2 ಶ್ರೀ ವಿಜಯದಾಸರ ಕೀರ್ತನೆಗಳು ಹಾಗೂ ಉಗಾಭೋಗಗಳು
10. ಸಂಪುಟ–10: ಭಾಗ–1 ಶ್ರೀ ವಿಜಯದಾಸರ ಸುಳಾದಿಗಳು (ಕ್ಷೇತ್ರದರ್ಶನ)
    ಭಾಗ–2 ಶ್ರೀ ವಿಜಯದಾಸರ ಸುಳಾದಿಗಳು (ಆತ್ಮನಿವೇದನೆ)
    ಭಾಗ–3 ಶ್ರೀ ವಿಜಯದಾಸರ ಸುಳಾದಿಗಳು (ತತ್ವನವನೀತ)
    ಭಾಗ–4 ಶ್ರೀ ವಿಜಯದಾಸರ ಸುಳಾದಿಗಳು (ಸಂಕೀರ್ಣ)
11. ಸಂಪುಟ–11: ಭಾಗ–1 ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು
    ಭಾಗ–2 ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು
12. ಸಂಪುಟ–12 ಶ್ರೀ ಗೋಪಾಲದಾಸರ ಕೀರ್ತನೆಗಳು
13. ಸಂಪುಟ–13 ಮೋಹನದಾಸರು ಮತ್ತು ಇತರ ಹರಿದಾಸರ ಕೀರ್ತನೆಗಳು
14. ಸಂಪುಟ–14 ಶ್ರೀ ಜಗನ್ನಾಥದಾಸರ ಕೀರ್ತನೆಗಳು
15. ಸಂಪುಟ–15 ಮುದ್ದುಮೋಹನ ವಿಠಲದಾಸರು ಹಾಗೂ ಇತರ ದಾಸರ ಕೀರ್ತನೆಗಳು
16. ಸಂಪುಟ–16 ಉರಗಾದ್ರಿ ವಿಠಲದಾಸರು ಮತ್ತು ಇತರರ ಕೀರ್ತನೆಗಳು
17. ಸಂಪುಟ–17 ಶ್ರೀಪ್ರಾಣೇಶದಾಸರು, ಶ್ರೀಗುರುಪ್ರಾಣೇಶದಾಸರು ಮತ್ತು ಶ್ರೀಶ್ರೀಶಪ್ರಾಣೇಶದಾಸರ ಹಾಡುಗಳು
18. ಸಂಪುಟ–18: ಭಾಗ–1 ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು
    ಭಾಗ–2 ನಿಡಗುರಕಿ ಜೀವುಬಾಯಿಯವರ ಕೀರ್ತನೆಗಳು
    ಭಾಗ–3 ಅಂಬಾಬಾಯಿ ಅವರ ಕೀರ್ತನೆಗಳು
    ಭಾಗ–4 ನಂಜನಗೂಡು ತಿರುಮಲಾಂಬ ಮತ್ತು ಇತರ ಮಹಿಳಾ ಹರಿದಾಸರ

ಕೀರ್ತನೆಗಳು

19. ಸಂಪುಟ–19 ಹರಪನಹಳ್ಳಿ ಭೀಮವ್ವನ ಹಾಡುಗಳು
20. ಸಂಪುಟ–20 ಸಿಂದಗಿ ಸಂಪ್ರದಾಯದ ಹಾಗೂ ಇತರ ಸಂತ ಕವಿಗಳ ಕೀರ್ತನೆಗಳು
21. ಸಂಪುಟ–21: ಭಾಗ–1 ಶ್ರೀದವಿಠಲರು ಮತ್ತು ಧಾರವಾಡ ಪ್ರದೇಶದ ಇತರ ಹರಿದಾಸರ ಕೀರ್ತನೆಗಳು

    ಬಾಗ–2 ಇಂದಿರೇಶರು ಹಾಗೂ ಧಾರವಾಡ ಪ್ರದೇಶದ ಇತರ ಹರಿದಾಸರ ಕೀರ್ತನೆಗಳು
22. ಸಂಪುಟ–22 ಶ್ರೀ ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳು
23. ಸಂಪುಟ–23 ತುಪಾಕಿ ವೆಂಕಟರಮಣಾಚಾರ್ಯ ಮತ್ತು ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರ ಕೀರ್ತನೆಗಳು
24. ಸಂಪುಟ–24 ಶ್ರೀ ವರಾಹ ತಿಮ್ಮಪ್ಪ ಹಾಗೂ ಇತರ ದಕ್ಷಿಣ ಕನ್ನಡದ ಕೀರ್ತನೆಗಳು
25. ಸಂಪುಟ–25 ಚಿದಾನಂದ ಅವದೂತರು ಮತ್ತು ಕೆಳದಿ ವೆಂಕಣ್ಣ ಕವಿಗಳ ಕೀರ್ತನೆಗಳು
26. ಸಂಪುಟ–26 ಶ್ರೀಗುರು ಜಗನ್ನಾಥದಾಸರು ಮತ್ತು ಇತರ ಸಮಕಾಲೀನರ ಕೃತಿಗಳು
27. ಸಂಪುಟ–27 ವಿಜಯರಾಮಚಂದ್ರವಿಠಲ ಮತ್ತು ಇತರ ಹರಿದಾಸರ ಕೀರ್ತನೆಗಳು
28. ಸಂಪುಟ–28 ಶ್ರೀ ವಿದ್ಯಾಪ್ರಸನ್ನತೀರ್ಥರು ಮತ್ತು ಇತರ ಯತಿಗಳ ಕೀರ್ತನೆಗಳು
29. ಸಂಪುಟ–29: ಭಾಗ–1 ಅನಂತಾದ್ರೀಶರ ಕೃತಿಗಳು ಹಾಗೂ ಹನ್ನೆರಂಗದಾಸರು

    ಭಾಗ–2 ಅಸ್ಗಿಹಾಳ ಗೋವಿಂದದಾಸರು ಮತ್ತು ಕಾರ್ಪರ ನರಸಿಂಹರ ಕೀರ್ತನೆಗಳು
30. ಸಂಪುಟ–30 ಶಾಮಸುಂದರ ವಿಠಲರು ಶ್ರೀ ತಿಮ್ಮಪ್ಪದಾಸರು ಮತ್ತು ಇತರ ಹರಿದಾಸರ ಕೀರ್ತನೆಗಳು
31. ಸಂಪುಟ–31: ಭಾಗ–1 ಗುರುಗೋವಿಂದ ವಿಠಲದಾಸರ ಕೀರ್ತನೆಗಳು

    ಭಾಗ–2 ಗುರುಗೋವಿಂದ ವಿಠಲದಾಸರ ಕೀರ್ತನೆಗಳು
32. ಸಂಪುಟ–32: ಭಾಗ–1 ರಾಮದಾಸರ ಕೀರ್ತನೆಗಳು

    ಭಾಗ–2 ಅಸೂರಿ ರಾಮಸ್ವಾಮಿದಾಸರು ಮತ್ತು ಇತರ ವೈಷ್ಣವ ಹರಿದಾಸರ ಕೀರ್ತನೆಗಳು
33. ಸಂಪುಟ–33 ಕವಿಪರದೇವ ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು
34. ಸಂಪುಟ–34 ಶ್ರೀಗುರುರಾಮವಿಠಲದಾಸರ ಕೀರ್ತನೆಗಳು
35. ಸಂಪುಟ–35 ಬೇಲೂರು ವೈಕುಂಠದಾಸರು ಮತ್ತು ಇತರ ವೈಷ್ಣವ ಹರಿದಾಸರ ಕೀರ್ತನೆಗಳು

ಒಟ್ಟಾರೆಯಾಗಿ ಹರಿದಾಸಸಾಹಿತ್ಯದ ಎಲ್ಲ ದಾಸರುಗಳ ಕೃತಿಗಳನ್ನು ಪ್ರಕಟಿಸುವ ಉದ್ದೇಶದಿಂದ ರೂಪುಗೊಂಡ ಈ ಯೋಜನೆಯ ಉದ್ದೇಶಗಳು ಬಹುಪಾಲು ಈಡೇರಿವೆ ಎನ್ನಬಹುದು. ದಾಸಸಾಹಿತ್ಯದ ಎಲ್ಲ ಹರಿದಾಸರುಗಳ

ಕೃತಿಗಳು ಜನಸಾಮಾನ್ಯರ ಕೈಸೇರಿ ದಾಸಸಾಹಿತ್ಯ ಪ್ರಸಾರ ನಡೆಯಲಿ ಎಂಬ ಉದ್ದೇಶದಿಂದ ಹುಟ್ಟಿಕೊಂಡ ಈ ಯೋಜನೆಯು ಬಹುಪಾಲು ಯಶಸ್ಸು ಕಂಡಿತು. 21ನೇ ಶತಮಾನದ ಮೊದಲ ದಶಕದಲ್ಲಿ ದಾಸಸಾಹಿತ್ಯ ಪ್ರಕಟಣೆಯಲ್ಲಿ ಈ ಸಂಪುಟಗಳು ಒಂದು ಮೈಲುಗಲ್ಲಾಯಿತು. ಈ ಯೋಜನೆಯಲ್ಲಿಯೇ ಸಂಪುಟಗಳನ್ನು ಪ್ರಕಟಿಸುವುದರ ಜೊತೆಗೆ ಆಯ್ದ ದಾಸಾರ‍್ಯರ ಕೀರ್ತನೆಗಳಿಗೆ ರಾಗ ಸಂಯೋಜನೆ ಮಾಡಿ ಜನರ ಮನವನ್ನು ತಲುಪುವ ಕಾರ‍್ಯವನ್ನು ಈ ಯೋಜನೆಯಲ್ಲಿ ಮಾಡಲಾಯಿತು. ಹಾಗಾಗಿಯೇ ಇಂದು ಅಂತರ್ಜಾಲದಲ್ಲಿ ದಾಸಾರ‍್ಯರ ಕೀರ್ತನೆಗಳು ನಮಗೆ ಕೇಳಲು ಲಭ್ಯವಾಗಿವೆ. ಇದೇ ಮಾದರಿಯಲ್ಲಿ ಇತ್ತೀಚಿನ ಅಂದರೆ 20ನೇ ಶತಮಾನದ ಆದಿಭಾಗದಿಂದ ಹರಿದಾಸ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ದಾಸಸಾಹಿತ್ಯದ ಪ್ರಕಾರಗಳಲ್ಲಿ ಕೀರ್ತನೆಗಳನ್ನು ರಚಿಸುತ್ತಿರುವ ಆಧುನಿಕ ಹರಿದಾಸರುಗಳ ಕೃತಿಗಳನ್ನು ಪ್ರಕಟಿಸುವ ಅನಿವಾರ್ಯತೆ ಇದೆ. ಹಾಗಾಗಿ ಇತ್ತೀಚಿನ ಹರಿದಾಸರ ಕೃತಿಗಳ ಸಂಪಾದನೆ, ಪ್ರಕಟಣೆ ನಡೆಯಬೇಕಿದೆ.

ಸಮಗ್ರ ದಾಸಸಾಹಿತ್ಯ ಸಂಪುಟಗಳು ಹರಿದಾಸಸಾಹಿತ್ಯದ ಬಹುಪಾಲು ಹರಿದಾಸರುಗಳ ಕೀರ್ತನ ಕೃತಿಗಳನ್ನು ಒಳಗೊಂಡಿದ್ದರೂ, ಕೆಲವು ಹರಿದಾಸರ ಕೃತಿಗಳು ಈ ಸಂಪುಟದಲ್ಲಿ ಪ್ರಕಟಣೆಯಾಗಿರುವುದಿಲ್ಲ. ಉದಾ: ಇತ್ತೀಚೆಗೆ ದಾಸಸಾಹಿತ್ಯದಲ್ಲಿ ಗುರುತಿಸಿಕೊಂಡ ಹರಿದಾಸರಾದ ಬೇಲೂರು ಕೇಶವದಾಸರ ಕೀರ್ತನೆಗಳು. ಹೀಗೆ ಇನ್ನೂ ಹಲವಾರು ದಾಸರ ಕೃತಿಗಳು ಈ ಸಂಪುಟದಲ್ಲಿ ಪ್ರಕಟಣೆಗೊಂಡಿರುವುದಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಈ ಸಂಪುಟಗಳ ಪರಿಷ್ಕರಣದ ಸಂದರ್ಭದಲ್ಲಿ ಇನ್ನುಳಿದ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸುವುದು ನಮ್ಮ ಸಂಶೋಧನಾ ವಿದ್ವಾಂಸರುಗಳ ಕರ್ತವ್ಯವಾಗಿದೆ. ಹೀಗೆ ಹತ್ತು ಹಲವು ವಿಶೇಷತೆಗಳಿಂದ ಗುರುತಿಸಿಕೊಂಡ ಸಮಗ್ರ ದಾಸಸಾಹಿತ್ಯದ ಸಂಪುಟಗಳೆಲ್ಲವೂ ಕೀರ್ತನೆ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಮಹತ್ವದ ಆಕರವನ್ನು ಒದಗಿಸುವ ಸಾಹಿತ್ಯ ಸಂಪತ್ತನ್ನು ತನ್ನ ಒಡಲಲ್ಲಿ ಇರಿಸಿಕೊಂಡ ಹರಿದಾಸ ಸಾಹಿತ್ಯದ ಕೋಶಗಳಾಗಿವೆ.

**ಅಡಿಟಿಪ್ಪಣಿ:**

1. ಶ್ರೀನಿವಾಸ ಹಾವನೂರ ಮತ್ತು ಅರಳುಮಲ್ಲಿಗೆ ಪಾರ್ಥಸಾರಥಿ (ಸಂ), ಸಮಗ್ರ ದಾಸಸಾಹಿತ್ಯ ಸಂಪುಟ–1 (2003), ಸಂಪುಟ ಯೋಜನೆ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ಪುಟ–16.

**ಪರಾಮರ್ಶನ ಗ್ರಂಥಗಳು:**


1. ಅರಳುಮಲ್ಲಿಗೆ ಪಾರ್ಥಸಾರಥಿ, ಕನ್ನಡ ಹರಿದಾಸ ಸಾಹಿತ್ಯ (1989), ಅಖಿಲ ಭಾರತ ಮಾಧ್ವ ಮಹಾಮಂಡಲ ಪ್ರಕಾಶನ, ಬೆಂಗಳೂರು.
2. ಶ್ರೀನಿವಾಸ ಹಾವನೂರ, ನಾಗರತ್ನ ಟಿ.ಎನ್, ವಸಂತ ಕುಷ್ಟಗಿ (ಪ್ರ.ಸಂ)., ಸಮಗ್ರ ದಾಸಸಾಹಿತ್ಯ 35 ಸಂಪುಟಗಳು (2003), ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.